

### ನೆನಪಿನ ರಂಗೋಲಿ

‘ಏಳು ಚುಕ್ಕಿ ರಂಗೋಲಿ’ (ಜೂ. 06, ಪ್ರವೀಣ್ ಕುಮಾರ್ ಜಿ.) ಪ್ರಬಂಧ ಚೆನ್ನಾಗಿ ಮೂಡಿಬಂದಿದೆ. ನನಗಿಂತ ಚೆನ್ನಾಗಿ ರಂಗೋಲಿ ಹಾಕಿ ಎಲ್ಲರಿಂದ ಭೇಷ್ ಎನ್ನಿಸಿಕೊಳ್ಳುತ್ತಿದ್ದ ನನ್ನ ಬಾಲ್ಯದ ಗೆಳೆಯ ಕಿಟ್ಟಿ ನೆನಪಾದ. ಹೆಣ್ಣುಮಕ್ಕಳು ರಂಗೋಲಿ ಹಾಕುವುದು ಸಹಜ. ಅದೇ ಗಂಡು ಮಕ್ಕಳು ಹಾಕಿದರೆ ಅವರನ್ನು ತಲೆ ಮೇಲೆ ಕಿರೀಟ ಇದ್ದಂತೆ ಪೋಸ್ ಕೊಡುತ್ತಾರೆ. ಆದರೂ ಹಾಡು ಹಸೆ ಎಂದರೆ ಹೆಣ್ಣುಮಕ್ಕಳಿಗೆ ಆದ್ಯತೆ. ಅವರಿಂದಲೇ ಮೆರುಗೂ ಅಲ್ವಾ?

–ಧನಲಕ್ಷ್ಮಿ ಪುರುಷೋತ್ತಮ, ಕೋಲಾರ

### ಮುಳ್ಳಿನ ಅನುಭವಗಳು

‘ಮುಳ್ಳಿನ ಮಾತುಗಳು’ (ಜೂ. 06, ಸವಿನಯ ಮಾಲ್ವೆ) ಲೇಖನ ಬಹಳ ಚೆನ್ನಾಗಿದೆ. ಚಿಕ್ಕಂದಿನಿಂದಲೂ ಬಗೆಬಗೆಯ ಮುಳ್ಳುಗಳನ್ನು ನೋಡಿ, ಅವುಗಳಿಂದ ಚುಚ್ಚಿಸಿಕೊಂಡು ನೋವು ಅನುಭವಿಸಿದವರು ನಾವು. ಲೇಖನ ಓದಿದಾಗ, ಗುಲಾಬಿ ಮುಳ್ಳು, ಕಾರೆ ಕಾಯಿ, ಬೊಗರಿ ಕಾಯಿ, ಚೂರಿ ಕಾಯಿ ಮುಳ್ಳುಗಳಿಂದ ಚುಚ್ಚಿಸಿಕೊಂಡ ನೆನಪು ಬಂತು. ಈಗಲೂ ಮನೆಯ ಮುಂದೆ ಇರುವ ಕರಂಡೆ ಕಾಯಿಯ ಉದ್ದ ಮತ್ತು ಚೂಪಾದ ಮುಳ್ಳಿನ ಮಧ್ಯೆ ಕೈ ತೂರಿಸಿ ಕಾಯಿ ಕೊಯ್ಯುವ ನೆನಪಾಯಿತು.

–ಕೆ. ಗಣೇಶ ರಾಜ, ಬೆಂಗಳೂರು

### ಮನಸೆಳೆದ ಕಥೆಯ ಧಾಟಿ

‘ಇಲಿ ಬೇಟೆ’ (ಮೇ 30, ಶಿವರಾಜ್ ಬ್ಯಾಡರಹಳ್ಳಿ) ಪ್ರಬಂಧ ಬಹಳ ಚೆನ್ನಾಗಿದೆ. ಕಥೆಯ ನಿರೂಪಣೆ ಹಾಗೂ ಭಾಷೆ ಸೊಗಸಾಗಿದೆ. ಹಳ್ಳಿ ಸೊಗಡಿನಲ್ಲಿ, ಹಾಸ್ಯ ಬೆರೆಸಿದಂತೆ ಕಥೆ ಹೇಳುತ್ತಾ ಸಾಗಿದ ಧಾಟಿಯೂ ಬಹಳ ಹಿಡಿಸಿತು.

–ಸಿಂಧು

### ವಿಚಾರಧಾರೆ...

ಲೋಹಿಯಾ ವಿಚಾರಧಾರೆ ಬಗೆಗಿನ ಧಾರಾವಾಹಿ ಪ್ರಕಟಿಸುತ್ತಿರುವುದು ಅಭಿನಂದನೀಯ. ಹಾಗೆಯೇ ವೈಚಾರಿಕ, ವೈಜ್ಞಾನಿಕ ಲೇಖನಗಳನ್ನು ಓದುಗರಿಗೆ ನೀಡುತ್ತಿರುವುದಕ್ಕೆ ‘ಸುಧಾ’ಗೆ ಧನ್ಯವಾದ.

–ಗಂಗಾದೇವಿ

### ಕಾಡುಪಾಪದ ಸುತ್ತ...



‘ಕೌತುಕ ಕಣ್ಣುಗಳ ಕಾಡುಪಾಪ’ (ಜೂ. 06, ರೂಪಾ ಕೆ.ಎಂ.) ಲೇಖನದಲ್ಲಿ ಕಾಡುಪಾಪದ ಕುರಿತ ಮಾಹಿತಿ ಅಚ್ಚರಿ ಮೂಡಿಸಿತು. ಕೆಲವು ವರ್ಷಗಳ ಹಿಂದೆ ಮಂಗಳೂರಿನಲ್ಲಿ ಗಿಳಿ ಶಾಸ್ತ್ರದ ಜ್ಯೋತಿಷಿ ಹತ್ತಿರ ಕಾಡುಪಾಪ ನೋಡಿದ್ದೆ. ಕಾಡು ಮನುಷ್ಯ ಎಂದು ಪರಿಚಯಿಸುತ್ತಿದ್ದ. ಇದರ ಎಂಜಲಿನ ಪಸೆಯನ್ನು ತಾಮ್ರದ ತಗಡಿಗೆ ತಗುಲಿಸಿ ದುಡ್ಡು ಪಡೆಯುತ್ತಿದ್ದ. ಈ ತಾಮ್ರದ ತಗಡನ್ನು ಮಕ್ಕಳ ಕೊರಳಿಗೆ ಕಟ್ಟಿದರೆ ರೋಗಬಾಧೆ ಇರುವುದಿಲ್ಲ ಎನ್ನುತ್ತಿದ್ದ. ಉಪ್ಪು ಇಲ್ಲದ ಅನ್ನ ಕೊಟ್ಟು ಕಾಡುಪಾಪವನ್ನು ಗೂಡಲ್ಲಿಟ್ಟು ಸಾಕುತ್ತಿದ್ದ. ಕೇವಲ 10–15 ದಿನದಲ್ಲೇ ಅದು ಸತ್ತುಹೋಯಿತು. ಜನರ ಮೌಢ್ಯ ಈ ತರಹದ ಕಾಡುಜೀವಿಗಳನ್ನು ನಾಶ ಮಾಡುತ್ತಿದೆ. ಸತ್ತ ಕಾಡುಪಾಪದ ಮಾಂಸ ಒಣಗಿಸಿ ದುಷ್ಪದೃಷ್ಟಿಗೆ ಚಿಕಿತ್ಸೆಯಂತೆ ಬಳಸುತ್ತಾರೆ ಎಂದೂ ಹೇಳುತ್ತಾರೆ.

–ಡೇವಿಡ್ ಡಿಸೋಜ, ಮಂಗಳೂರು




### ಉತ್ತಮ ವಿಶ್ಲೇಷಣೆ

‘ಐಸಿಸಿ ಟಿ–20 ವಿಶ್ವಕಪ್’ ಗುಮ್ಮನ ಗೆಲ್ಲುವರೆ’ (ಜೂ. 06, ಪ್ರಮೋದ) ಮುಖಪುಟ ಲೇಖನ ಭಾರತ ಕ್ರಿಕೆಟ್‌ರಂಗದ ಕುರಿತು ಸಮಗ್ರ ಮಾಹಿತಿಯನ್ನು ಒದಗಿಸಿದೆ. ಚುಟುಕು ಕ್ರಿಕೆಟ್ ಜನಪ್ರಿಯತೆಗೆ ಸಂಬಂಧಿಸಿದಂತೆ ಉತ್ತಮ ಮಾಹಿತಿಯೊಂದಿಗೆ ವಿಶ್ಲೇಷಣೆಯನ್ನೂ ಒಳಗೊಂಡಿದೆ. ಭಾರತ ಕ್ರಿಕೆಟ್ ತಂಡದ ಬಲದ ಜೊತೆಗೆ ಕುಂದುಕೊರತೆ, ತಂಡದ ಎದುರಿಗಿರುವ ಸವಾಲುಗಳ ಮೇಲೂ ಬೆಳಕು ಚೆಲ್ಲಿದೆ.

–ಚೇತನ್ ಸಿ.ಎನ್., ಬೆಂಗಳೂರು

### ‘ಬಡಗಣ ಬೆಳಕು’

‘ತೆಂಕಣ ಬೆಳಕು ಭುವನದ ಭಾಗ್ಯ’ (ಜೂ. 06, ಎಸ್.ಪಿ. ವಿಜಯಲಕ್ಷ್ಮಿ) ಲೇಖನದಲ್ಲಿ ‘ಅರೋರಾ ಬೋರಿಯಾಲಿಸ್’ ಬಗ್ಗೆ ವಿವರಣೆ ಹಾಗೂ ಛಾಯಾಚಿತ್ರಗಳು ಬಹಳ ಚೆನ್ನಾಗಿವೆ. ಆದರೆ ‘ನಾರ್ದರ್ನ್ ಲೈಟ್ಸ್’ಗೆ ಕನ್ನಡದಲ್ಲಿ ‘ಬಡಗಣ ಬೆಳಕು’ ಸರಿಯಾದ ಅನುವಾದ.

–ಹಿ.ಶಾ. ಸುಬ್ರಹ್ಮಣ್ಯ, ಬೆಂಗಳೂರು

### ಮೂಕವಿಸ್ಮಿತ

ಈಚೆಗೆ ‘ನಾರ್ದರ್ನ್ ಲೈಟ್ಸ್’ ವಿದ್ಯಮಾನವನ್ನು ಜರ್ಮನಿಯಲ್ಲಿ ನೋಡುವ ಅವಕಾಶ ನನಗೆ ಒದಗಿಬಂದಿತ್ತು. ಪ್ರಕೃತಿಯ ವಿಸ್ಮಯ ಕಂಡು ಮೂಕವಿಸ್ಮಿತವಾಗಿದ್ದೆ.

–ಶ್ರೀಶ, ಬೆಂಗಳೂರು



### ಸರಳ, ಸುಂದರ ಮಾಹಿತಿ

ಕಳೆದ ತಿಂಗಳು ಅಮೆರಿಕದಲ್ಲಿ ಕೂಡ ‘ನಾರ್ದರ್ನ್ ಲೈಟ್ಸ್’ ಕಾಣಿಸಿದ ಕುರಿತು ಓದಿದ್ದೆ. ಲೇಖನ ಬಹಳ ಸರಳವಾಗಿ ಅದರ ಬಗ್ಗೆ ತಿಳಿಸಿಕೊಟ್ಟಿತು.

–ಉಷಾ



### ಸಾಮಾಜಿಕ ಕಳಕಳಿಗೆ ನಮನ

‘ಹಸಿರುಸಖ ಮಾಳದ ಗೋವಿಂದಣ್ಣ ಏಕಾಂಗಿಯಾಗಿ ರಸ್ತೆ ನಿರ್ಮಿಸಿದರಣ್ಣ’ (ಜೂ. 06, ಕೋಡಿಬೆಟ್ಟು ರಾಜಲಕ್ಷ್ಮಿ) ಮಾಳದ ಗೋವಿಂದಣ್ಣನ ಸಾಮಾಜಿಕ ಕಳಕಳಿ ಕಂಡು ಆನಂದವಾಯಿತು. ಇವರ ಬಗ್ಗೆ ಓದಿ ಜನಪ್ರತಿನಿಧಿಗಳಿಗೆ, ಸರ್ಕಾರಕ್ಕೆ ನಾಚಿಕೆ ಆಗಬೇಕು. ಒಬ್ಬ ಗ್ರಾಮೀಣ ಪ್ರದೇಶದ, ಬಡ ಮನುಜನಿಗೆ ಇರುವ ಕಳಕಳಿ ಅಧಿಕಾರಸ್ಥರಿಗೆ ಇಲ್ಲದಾಯಿತಲ್ಲ ಎಂದು ಬೇಸರವಾಯಿತು. ರಸ್ತೆಯ ಇಕ್ಕೆಲಗಳಲ್ಲಿ ತೋಡು ನಿರ್ಮಿಸಿ ನೀರು ಹೋಗಲು ಅನುವು ಮಾಡಿಕೊಟ್ಟ ಅವರ ಜ್ಞಾನ ಈಗಿನ ಎಂಜಿನಿಯರುಗಳಿಗೆ ಇಲ್ಲ. ಆತ್ಮೀಯ ಗೋವಿಂದಣ್ಣವರಿಗೆ ನನ್ನ ಪ್ರೀತಿಪೂರ್ವಕ ನಮಸ್ಕಾರ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ಎಲೆಮರೆಯ ಕಾಯಿ

ಗೋವಿಂದ ಮಲೆಕುಡಿಯ ಅವರ ಕುರಿತ ಲೇಖನ ಓದಿ ಸಂತೋಷವಾಯಿತು. ಈ ರೀತಿ ಎಷ್ಟೋ ಜನರು ‘ಎಲೆಮರೆಯ ಕಾಯಿ’ಯಂತೆ ಸಮಾಜ ಸೇವೆ ಮಾಡುತ್ತಾ ಇದ್ದಾರೆ. ಇವರನ್ನು ಸರ್ಕಾರ ಗುರುತಿಸಬೇಕು.

–ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in